**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 33/2018** ಸಿ.ಡಬ್ಲ್ಯೂ -16

ಪಿ.ಡಬ್ಲ್ಯೂ -13

ಹೆಸರು : ಡಾಃ ದೀಪಕ

ತಂದೆಃಗಂಡ : ಧೂಳಪ್ಪ

ವಯಸ್ಸು : 40 ವರ್ಷ

ಉದ್ಯೋಗ : ಸಹಾಯಕ ಪ್ರಾಧ್ಯಾಪಕ, ಜಿಮ್ಸ ಕಲಬುರಗಿ.

ವಾಸಸ್ಥಳ : ಕಲಬುರಗಿ

ದಿನಾಂಕಃ13.09.2023

**ಸತ್ಯ ಪ್ರತಿಜ್ಞೆಯ ಮೇರೆಗೆ.**

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು 2014 ರಿಂದ ಇಲ್ಲಿಯವರೆಗೂ ಜಿಮ್ಸ ಆಸ್ಪತ್ರೆ ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೆನೆ. ದಿ.03.05.2017 ರಂದು ಮದ್ಯಾಹ್ನ 3.30 ಗಂಟೆಗೆ ಎಎಸಐ ನರೋಣಾ ಪೋಲಿಸ ಠಾಣೆರವರ ಕೋರಿಕೆ ಮೇಲರೆಗೆ ಮೃತ ಶ್ರೀಶೈಲ ತಂದೆ ನಾಗೇಂದ್ರ ಕೊರಳ್ಳಿರವರ ಮರಣೋತ್ತರ ಪರಿಕ್ಷೆಯನ್ನು ಕೈಗೊಂಡಿರುತ್ತೇನೆ. ಮೃತದೇಹ 30 ವಯಸ್ಸಿನ ಗಂಡಸಿನದ್ದಾಗಿರುತ್ತದೆ, ಸಾಧಾರಣ ಮೈಕಟ್ಟು ಹೊಂದಿದ್ದು ಶವವು ತಂಪಾಗಿರುತ್ತದೆ. ಮಾಂಸಖಂಡಗಳ ಶೆಟೆತವು ಕೈ ಹಾಗೂ ಕಾಲುಗಳಲ್ಲಿ ಕಂಡು ಬಂದಿರುತ್ತದೆ. ಮರಣೊತ್ತರ ಲಿವಿಡಿಟಿ ಬೆನ್ನಿನ ಮೇಲೆ ಇರುತ್ತದೆ. ಮೂಗಿನಿಂದ, ಬಾಯಿಯಿಂದ ಹಾಗೂ ಕಿವಿಗಳಿಂದ ರಕ್ತ ಸುರಿದಿರುತ್ತದೆ. ದೇಹದ ಮೇಲೆ ಈ ಕೆಳಕಂಡ ಗಾಯಗಳು ಆಗಿರುತ್ತವೆ.

ಹಣೆಯ ಬಲಭಾಗದಲ್ಲಿ 4X3 ಸೆಂ.ಮಿ. ಕೆಂಪಾದ ತೆರಚಿದ ಗಾಯ ಕಂಡು ಬಂದಿರುತ್ತದೆ. ಬಲಗಣ್ಣಿನ ಬಳಿ 4X2 ಸಸಿ.ಮಿ. ಹರಿದ ಗಾಯ ಕಣ್ಣು ಕೂಡ ಹರಿದಿರುತ್ತದೆ. ಕೆಳಗಣ್ಣಿನ ಸುತ್ತ ಕಂದು ಗಟ್ಟಿದ ಗಾಯ ಕಂಡು ಬಂದಿರುತ್ತದೆ. ಕೆಳತುಟಿಯ ಮೇಲೆ 4X2X1 ಸೆಂ.ಮಿ. ಹರಿದ ಗಾಯ ಕಂಡು ಬಂದಿರುತ್ತದೆ. ಕೆಳಗಿನ ಎರಡು ಹಲ್ಲುಗಳು ಮುರಿದಿದ್ದವು. ಬಲರಟ್ಟೆಯ ಮೆಲೆ 4X3 ಸೆಂ.ಮಿ. ಅಳತೆಯ ಹರಿದ ಗಾಯ ಇರುತ್ತದೆ. ಕುತ್ತಿಗೆಯ ಬಲಭಾಗದ ಮೇಲೆ 4X3 ಸೆಂ.ಮಿ. ಅಳತೆಯ ಹರಿದ ಗಾಯ ಇರುತ್ತದೆ. ಬಲ ಮುಂಗೈಮೇಲೆ ಹಾಗೂ ರಟ್ಟೆಯ ಮೇಲೆ 22X4 ಸೆಂ.ಮಿ. ಅಳತೆಯ ಕೆಂಪಾದ ತೆರಚಿದ ಗಾಯ ಇರುತ್ತದೆ. ಬಲಗೈ ಮುಂಭಾಗದ ಎರಡು ಮೂಳೆಗಳು ಮುರಿದಿದ್ದವು. ಬಲ ಮೊಳಕಟ್ಟಿನ ಮೇಲೆ 4X2 ಸೆಂ.ಮಿ. ಹರಿದ ಗಾಯ ಇರುತ್ತದೆ. ಬಲತೊಡೆಯ ಮೇಲೆ 15X8 ಸೆಂ.ಮಿ. ಹರಿದ ಗಾಯ ಇರುತ್ತದೆ, ಬಲ ಮೊಳಕಾಲಿನ ಮೇಲೆ 4X2 ಸೆಂ.ಮಿ. ಹರಿದ ಗಾಯ, ಬಲ ಕೆಳಕಾಲಿನ ಮೇಲೆ 42X7 ಸೆಂ.ಮಿ. ಕೆಂಪು ಬಣ್ಣದ ತೆರಚಿದ ಗಾಯ, ಎಡ ಮೊಳಕಾಲಿನ ಮೇಲೆ 4X2 ಸೆಂ.ಮಿ. ಕೆಂಪು ಬಣ್ಣದ ತೆರಚಿದ ಗಾಯ ಇರುತ್ತದೆ. ಈ ಎಲ್ಲ ಗಾಯಗಳು ಮರಣಪೂರ್ವದಲ್ಲಿ ಸಂಭವಿಸಿರುವ ಗಾಯಗಳು ಆಗಿರುತ್ತವೆ. ತಲೆ ಬುರುಡೆಯನ್ನು ಪರಿಕ್ಷಿಸಿದಾಗ ತಲೆ ಬುರುಡೆಯು ಮುರಿದಿತ್ತು. ಮೆದುಳಿನಲ್ಲಿ ರಕ್ತಸ್ರಾವ ಆಗಿತ್ತು. ಎದೆ ಗುಡನ್ನು ಪರಿಕ್ಷಿಸಿದಾಗ ಎದೆ ಗೋಡೆ ಸ್ವಾಶಕೋಶ ಪದರ, ಧ್ವನಿ ಪೆಟ್ಟಿಗೆ, ಶ್ವಾಸನಾಳ ಹಾಗೂ ಶ್ವಾಸಕೋಶಗಳು ಹಾಗೂ ಹೃದಯ ಸುಸ್ಥಿತಿಯಲ್ಲಿ ಇದ್ದವು. ಉದರವನ್ನು ಪರಿಕ್ಷಿಸಿದಾಗ ಉದರ ಗೋಡೆ ಉದರ ಪೊರೆ, ಗಂಟಲು, ಅನ್ನನಾಳ, ಚಿಕ್ಕ ಹಾಗೂ ದೊಡ್ಡ ಕರಳು, ಪತ್ತ ಜನಕಾಂಗ ಹಾುಗಾ ಗುಲ್ಮ ಸುಸ್ಥಿತಿಯಲ್ಲಿ ಇದ್ದವು. ಜಠರದಲ್ಲಿ

50 ಎಂಎಂನಷ್ಟು ದ್ರವ ಪದಾರ್ಥ ಯಾವುದೇ ವಾಸನೆ ಇರಲಿಲ್ಲ. ಮೂತ್ರ ಜನಕಾಂಗಗಳು ಪರಿಕ್ಷಿಸಿದಾಗ ಮೂತ್ರ ಪಿಂಡಗಳು ಹಾಗೂ ಸಂತಾನಾಬಿವೃದ್ದಿ ಅಂಗಗಳು ಸುಸ್ಥಿತಿಯಲ್ಲಿ ಇದ್ದವು. ನಾನು ಮರಣದ ಸಮಯದ ಬಗ್ಗೆ ಅಭಿಪ್ರಾಯ ಕೊಟ್ಟಿದ್ದು ಮರಣೋತ್ತರ ಪರಿಕ್ಷೆಯ 6-12 ಗಂಟೆ ಮುಂಚಿತವಾಗಿ ಸಂಬಭವಿಸಿರುತ್ತದೆ. ಸಾವಿನ ಬಗ್ಗೆ ಅಭಿಪ್ರಾಯ ನೀಡಿದ್ದು ತಲೆಗೆ ಗಾಯವಾದ ಕಾರಣ ಮೆದುಳಿನಲ್ಲಿ ರಕ್ತಸ್ರಾವವಾಗಿ ಸಾವು ಸಂಭವಿಸಿರುತ್ತದೆ.

ಸಾಕ್ಷಿಗೆ ಈಗ ಪಿಎಂ ರಿಪೋರ್ಟ ತೋರಿಸಿ ಅದನ್ನು ಗುರುತಿಸಿದ್ದು ಪಿಎಂ ರಿಪೋರ್ಟ ನಿಪಿ-18 ಎಂದು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಸ್.ಸಿ. ವಕೀಲರರಿಂದ.**

ನಿಪಿ-18 ರಲ್ಲಿ ನಿಶ್ಕಾಳಜಿತನದಿಂದ ವಾಹನ ಚಲಾಯಿಸಿದ ಕಾರಣ ಸಾವು ಸಂಭವಿಸಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮರಣೊತ್ತರ ಪರಿಕ್ಷೆ ಮಾಡಿದ ನಂತರ ಅದರ ಬಗ್ಗೆ ಉತ್ತರ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ.ಸಿ. ಆಳಂದ.